## ಕೆಟ್ಟ ಸಂದೇಶ ನೀಡುತ್ತಿರುವ ಟೀವಿ

ನಮ್ಮ ದೇಶವನ್ನು ಮೂಢನಂಬಿಕೆಗಳ ತವರೂರು ಎನ್ನುತ್ತಾರೆ. ಈ ಮಾತನ್ನು ಇನ್ನಷ್ಟು ಪುಷ್ಟೀಕರಿಸುತ್ತಿವೆ ನಮ್ಮ ಟೀವಿಗಳು. ಬೆಳಗಿನ ವೇಳೆ ನೀವು ಯಾವುದೇ ಚಾನಲ್ ಹಾಕಿ. ಅಲ್ಲಿ ಪ್ರಸಾರವಾಗುತ್ತಿರುವುದೇ ಭವಿಷ್ಯವಾಣಿ. ಯಾವ್ಯಾವುದೋ ಗ್ರಹಗಳ ಬಗ್ಗೆ ಹೈಲೈಟ್ ಮಾಡಿ, ದಾನಗಳನ್ನು ಸೃಷ್ಟಿಸಿ, ದೇವಸ್ಥಾನಗಳನ್ನು ಸುತ್ತುವ ಉಪದೇಶವನ್ನು ಕೊಡುವ ಜ್ಯೋತಿಷಿಗಳನ್ನು ನಾವು ದಿನನಿತ್ಯ ಕಾಣುತ್ತೇವೆ.ಒಂದು ರೀತಿಯಲ್ಲಿ ಮಹಿಳೆಯರನ್ನು ವಶೀಕರಣ ಮಾಡಿದ್ದಾರೆ ಎಂದರೂ ತಪ್ಪಿಲ್ಲ.

ಇನ್ನು ಗ್ರಹಣಗಳು ಸಂಭವಿಸುತ್ತವೆ ಎಂದು ಗೊತ್ತಾದ ಹತ್ತು ದಿನಗಳ ಮೊದಲೇ ಕೆಲವು ನಕ್ಷತ್ರಗಳವರಿಗೆ ಆಗುವ ದೋಷಗಳ ಬಗ್ಗೆ ವಿಚಿತ್ರ ಸ್ವರದಲ್ಲಿ ಹೇಳಿದ್ದನ್ನೇ ಹೇಳುತ್ತಾ, ಅವರನ್ನು ಜೀವಂತವಾಗಿ ಕುಗ್ಗಿಸಿ ಬಿಡುತ್ತಾರೆ. ಕೆಲವರಂತೂ ಅದನ್ನು ಪೂರ್ಣವಾಗಿ ನಂಬಿ ಅವರು ಹೇಳಿದಂತೆಲ್ಲಾ ಮಾಡುತ್ತಾರೆ. ವಾಸ್ತವವನ್ನು ನಂಬುವ ಸ್ಥಿತಿಯಲ್ಲಿ ಅವರು ಇರುವುದೇ ಇಲ್ಲ.

ಮನರಂಜನೆಗಾಗಿ ಧಾರಾವಾಹಿ ನೋಡೋಣ ಎಂದರೆ ಅವೂ ಇದರಿಂದ ಹೊರತಾಗಿಲ್ಲ. ಅಲ್ಲೂ ಬಾಬಾಗಳು, ಸ್ವಾಮೀಜಿ, ಜ್ಯೋತಿಷಿ, ಬುಡುಬುಡಿಕೆಯವ, ಕೊರವಂಜಿ ಹೀಗೆ ಯಾರಾದರೊಬ್ಬರು ಅವರ ಬುದ್ಧಿ ಕೆಡಿಸಲು ಇದ್ದೇ ಇರುತ್ತಾರೆ. ಅವರದ್ದೇ ಪ್ರಧಾನ ಪಾತ್ರ. ಅವರು ಹೇಳಿದ್ದೆಲ್ಲಾ ಅಕ್ಷರಶಃ ನಿಜವಾಗುತ್ತದೆ. 'ಗೀತಾ'ದಲ್ಲಿನ ಸ್ವಾಮೀಜಿಗೆ ಆ ಹುಡುಗಿಯ ಮುಖವೂ ಅಂಜನದಲ್ಲಿ ಕಾಣಿಸುತ್ತಿರುವುದು ಸೋಜಿಗದ ಸಂಗತಿ. ಇಬ್ಬರ ಸ್ಪರ್ಶವಾದರೆ ಸಾಕು. ಬಿರುಗಾಳಿ ಬೀಸುತ್ತದಂತೆ, ಶಂಖ ಮೊಳಗುತ್ತದಂತೆ. ಇದನ್ನೆಲ್ಲಾ ನೋಡುತ್ತಿದ್ದರೆ ನಗುವುದೋ ಅಳುವುದೋ ಟೀವಿಯವರೇ ಹೇಳಿ?

—ಪುಷ್ಪ ಎಸ್.ಕೆ. ರಾವ್

## ಕನ್ನಡ ಅಧ್ಯಾಪಕರ ದುಸ್ಥಿತಿಗೆ ಕನ್ನಡಿ

ಕಲರ್ಸ್ ಕನ್ನಡದಲ್ಲಿ ಈಚೆಗೆ ಪ್ರಸಾರವಾಗುತ್ತಿರುವ 'ಕನ್ನಡತಿ' ವಿಶಿಷ್ಟ ಛಾಪು ಮೂಡಿಸಿದೆ. ಹಸಿರುಪೇಟೆ ಎಂಬ ಚಿಕ್ಕ ಊರಿನ ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಅರೆಕಾಲಿಕ ಉಪನ್ಯಾಸಕಿ ಅಲ್ಲಲ್ಲ ಪಾರ್ಟ್ ಟೈಮ್ ಉಪನ್ಯಾಸಕಿಯಾಗಿರುವ ಭುವನೇಶ್ವರಿ ಕನ್ನಡ ಅರೆಕಾಲಿಕ ಉಪನ್ಯಾಸಕರ ದುಃಸ್ಥಿತಿಯನ್ನು ಬಹಳ ಚೆನ್ನಾಗಿ ಪ್ರತಿನಿಧಿಸುತ್ತಾಳೆ.

ಇವೆಂಟ್ ಮ್ಯಾನೇಜ್‌ಮೆಂಟ್ ಸಂಸ್ಥೆಯ ಮೂಲಕ ನಡೆಯುವ ವೈಭವದ ಮದುವೆಯನ್ನೂ ಒಂದು ವ್ಯವಹಾರದಂತೆ ಕಾಣುವ ಶ್ರೀಮಂತರ ನಡುವೆ ಹಸಿರುಪೇಟೆಯಿಂದ ಬಂದ. ಕನ್ನಡ ಪ್ರೇಮಿ ಭುವನೇಶ್ವರಿ ಅಚ್ಚರಿಯಿಂದ ಕಾಣುವ ರೀತಿ ಸೊಗಸಾಗಿದೆ. ಬಹುಶಃ ಮುಖ್ಯ ಕಥೆ ಮುಂದೆ ಪ್ರಾರಂಭವಾಗುತ್ತದೆ. ಆದರೆ ಈ ಧಾರಾವಾಹಿಯ ಹೈಲೈಟ್ ಪ್ರತಿ ಕಂತಿನ ಕೊನೆಯಲ್ಲಿ ಕಥಾನಾಯಕಿ ಮಾಡುವ ಪಾಠ. ಒಂದೊಂದು ಕಂತಿನಲ್ಲಿ ಒಂದೊಂದು ಪದವನ್ನು ಹೆಕ್ಕಿ ಜನಸಾಮಾನ್ಯರು ಸಾಮಾನ್ಯವಾಗಿ ಮಾಡುವ ತಪ್ಪನ್ನು ತೋರಿಸಿ, ಅದರ ಸರಿ ಉಚ್ಚರಣೆ ಹಾಸ್ಯದಿಂದ ತಿಳಿಸಿಕೊಡುವ ರೀತಿ ವಿಶೇಷ. ಬಹುಶಃ ಯಾವ ಧಾರಾವಾಹಿಯೂ ಈ ಪ್ರಯತ್ನ ಮಾಡಿದ ಹಾಗಿಲ್ಲ. 'ಸಿರಿಗನ್ನಡಂ ಗೆಲ್ಗೆ' ಎಂಬ ಘೋಷಣೆ ಅರ್ಥಪೂರ್ಣವಾಗಿದೆ. ರಂಜನಿ ರಾಘವನ್, ಕಿರಣ್ ಜೊತೆ ಇತರ ಕಲಾವಿದರೂ ಚೆನ್ನಾಗಿ ನಟಿಸಿದ್ದಾರೆ.

—ಎಸ್. ಚಂದ್ರಕಾಂತ ಬೆಂಗಳೂರು

ವಾರದ ಪತ್ರ

## ದಡ್ಡತನದ ವೈಭವೀಕರಣ ಬೇಕಿಲ್ಲ

ಝೀ ಕನ್ನಡದ 'ಜೊತೆ ಜೊತೆಯಲಿ' ಕತೆಯಲ್ಲಿ ಭಿನ್ನವಾಗಿರುವ ಕಾರಣ ಹೆಚ್ಚಿನವರು ಇಷ್ಟಪಡುತ್ತಾರೆ ಎಂದೆನಿಸುತ್ತದೆ. ಆದರೆ ಇದರಲ್ಲಿ ಆರ್ಯವರ್ಧನ್ ತಮ್ಮ ಹರ್ಷವರ್ಧನ್ ಪಾತ್ರವನ್ನು ದಡ್ಡನಂತೆ ಬಿಂಬಿಸಿರುವುದು ಯಾಕೋ ಅತಿಯಾದಂತೆ ಅನಿಸುತ್ತದೆ. ಒಂದು ರೀತಿಯಲ್ಲಿ ನೋಡಿದರೆ ಕತೆಗೆ ಈ ಪಾತ್ರದ ಅವಶ್ಯಕತೆ ಇದೆ ಅಂತನಿಸುವುದಿಲ್ಲ. ಇದ್ದರೂ ಕೇವಲ ಧಾರಾವಾಹಿಯನ್ನು ಲಂಬಿಸಲು ಇರುವ ಬುದ್ಧಿಗೇಡಿ ಪಾತ್ರದಂತೆ ಭಾಸವಾಗುತ್ತದೆ.

ಪ್ರಸ್ತುತ ಸಾಮಾಜಿಕ ಸ್ಥಿತಿಗತಿಗಳ ವಾತಾವರಣದಲ್ಲಿ ವ್ಯಕ್ತಿ ಎಷ್ಟೇ ಅಮಾಯಕನಾಗಿದ್ದರೂ ವಿಧಾನಸೌಧವನ್ನು ಕೊಳ್ಳುವಂತಹ, ಸಾಮಾನ್ಯ ಕಾಗದದಿಂದ ಕರೆನ್ಸಿ ನೋಟನ್ನು ತಯಾರಿಸುವಂತಹ, ಯಾವುದೋ ದ್ರಾವಣದಿಂದ ಪೆಟ್ರೋಲ್ ತಯಾರಿಸುವಂತಹ, ವಾಸ್ತುವಿನ ಅತಿ ನಂಬಿಕೆಯಿಂದ ಆಫೀಸಿನ ರೂಪುರೇಷೆಗಳನ್ನು ವಿಚಾರವಿಲ್ಲದೆ ಬದಲಾಯಿಸುವಂತಹ ಮೂರ್ಖತನಕ್ಕೆ ಕೈಹಾಕುವುದಿಲ್ಲ. ಇವೆಲ್ಲ ತಿಳಿಗೇಡಿ ನಡವಳಿಕೆಯ ಅತಿವಿಜೃಂಬಿತ ನೋಟಗಳು. ಇವು ಧಾರಾವಾಹಿಯ ಕತೆಗೆ ಪೂರಕವಾಗಿ ಇಲ್ಲಾ ಹಾಸ್ಯದ ಸಂಗತಿಯಾಗಿ ನೋಡುಗರಿಗೆ ಕಾಣಿಸುವುದಿಲ್ಲ. ಇಂತಹ ಅಪ್ರಬುದ್ಧ ನಡವಳಿಕೆಗಳನ್ನು ಕತೆಯ ಮಧ್ಯೆ ಸೇರಿಸುವುದರಿಂದ ನೋಡುಗರ ಕಣ್ಣಿನಲ್ಲಿ ಧಾರಾವಾಹಿಯ ಗುಣಮಟ್ಟ, ತೂಕ ಇಳಿಯುವುದರಲ್ಲಿ ಸಂಶಯವಿಲ್ಲ. ತನ್ನ ದಡ್ಡತನದಿಂದ ಎಲ್ಲರ ಉಸಿರುಗಟ್ಟಿಸುವಂತಹ ವಾತಾವರಣವನ್ನು ಸೃಷ್ಟಿಸುವಲ್ಲಿ ಧಾರಾವಾಹಿಗೆ ಸಿಗುವ ಲಾಭವೇನು? ನಿರ್ದೇಶಕರು ಎಲ್ಲ ಆಯಾಮಗಳಿಂದ ಚಿಂತಿಸುವ ಅಗತ್ಯವಿದೆ.

—ಧರ್ಮಾನಂದ ಶಿರ್ವ, ಬೆಂಗಳೂರು

## ಕನ್ನಡವೇ ಮಾತಾಡಿ

ಕಲರ್ಸ್ ಕನ್ನಡದಲ್ಲಿನ 'ಹಾಡು ಕರ್ನಾಟಕ' ಚೆನ್ನಾಗಿ ಬರುತ್ತಿದೆ. ಮುಂಬರುವ ಕಂತುಗಳಲ್ಲಿಯೂ ತೀರ್ಪುಗಾರರು– ಹಾಡುಗಾರರು ಕರ್ನಾಟಕ ಹೆಸರು ಆದಷ್ಟು ಕನ್ನಡದಲ್ಲೇ ಮಾತನಾಡಲಿ. ಅನಗತ್ಯವಾಗಿ ಇಂಗ್ಲಿಷ್ ಪದಗಳನ್ನು ಸೇರಿಸಿ ಕನ್ನಡದ ಹಾಡಿನ ಅಂದ ಕೆಡಿಸಬೇಡಿ. ಹಾಡಿನ ಬಗ್ಗೆ ತೀರ್ಪು ನೀಡುವಾಗ ಕೂಡ ಕನ್ನಡದಲ್ಲಿಯೇ ಹೇಳಿದರೆ ಕೇಳಲು ಕಂಪು ಮತ್ತು ಇಂಪಾಗಿರುತ್ತೆ.

—ಸೀತಾ ಕೇಶವ ಸಿಡ್ನಿ.

## ದ್ವಂದ್ವಾರ್ಥಗಳ ದೌರ್ಬಲ್ಯ

ಝೀ ಕನ್ನಡದ 'ಕಾಮಿಡಿ ಕಿಲಾಡಿ' ಸೀಜನ್ 3 ಪ್ರಾರಂಭವಾಗಿದ್ದು, ಅದರಲ್ಲಿ ಹಳಬರು– ಹೊಸಸ್ಪರ್ಧಿಗಳೂ ಇದ್ದಾರೆ. ಅವರು ತಮ್ಮ ರೂಪಕಕ್ಕೆ ಆಯ್ಕೆ ಮಾಡಿಕೊಳ್ಳುತ್ತಿರುವ ವಿಷಯಗಳು ನಗು ತರದೆ ಅರ್ಥಹೀನ ಎನಿಸುತ್ತವೆ. ಅಸಂಬದ್ಧ, ಅಶ್ಲೀಲ ಸಂಭಾಷಣೆಯಿಂದ ಕೂಡಿರುತ್ತವೆ. ನಟ– ನಟಿಯರ ಕೆಟ್ಟ ಆಂಗಿಕ ಅಭಿನಯ ಮತ್ತು ಅಶ್ಲೀಲ ಸಂಭಾಷಣೆಗೆ ತೀರ್ಪುಗಾರರಾದ ಜಗ್ಗೇಶ್, ರಕ್ಷಿತಾ ಹಾಗೂ ಯೋಗರಾಜ್ ಭಟ್ಟರು ಮೈ ಕುಲುಕಿ ಕೈ ಜೋಡಿಸಿ ಪ್ರೋತ್ಸಾಹಿಸುತ್ತಾರೆ ಎಂಬುದೇ ದುರಂತವೇ ಸರಿ. ನಿಜಕ್ಕೂ ಇಂತಹ ಕಾರ್ಯಕ್ರಮಗಳಿಂದ ಕೀಳು ಅಭಿರುಚಿಯನ್ನು ಉದ್ದೀಪನ ಮಾಡುತ್ತಿದ್ದಾರೆ.

—ಶಿವಮೊಗ್ಗ ರಮೇಶ್, ಮೈಸೂರು

## ಮಂದ 'ಮಗಳು ಜಾನಕಿ'

ಅಯಸ್ಕಾಂತದಂತೆ ವೀಕ್ಷಕರನ್ನು ಹಿಡಿದಿಟ್ಟುಕೊಂಡು ಅವರ ಕುತೂಹಲ ಮತ್ತು ನಿರೀಕ್ಷೆಗೆ ಸ್ಪಂದಿಸುತ್ತಿದ್ದ ಕಲರ್ಸ್ ಸೂಪರ್‌ನ 'ಮಗಳು ಜಾನಕಿ' ಇತ್ತೀಚೆಗೆ ತನ್ನ ಆಕರ್ಷಣೆಯನ್ನು ಕಳೆದುಕೊಂಡಿದೆ. 'ಬಂಗಾರುಪೇಟೆ ಪ್ಯಾಸೆಂಜರ್' ರೈಲಿನಂತೆ ಓಡುತ್ತಿದೆ. ಉಪಕಥೆಗಳು ಸೇರಿಕೊಳ್ಳುತ್ತಾ, ಮುಖ್ಯಕಥೆ ಹಳ್ಳ ಹಿಡಿದಂತೆ ಕಾಣುತ್ತದೆ. ನಿರ್ದೇಶನದಲ್ಲಿ ಬಿಗಿ ಹಿಡಿತ ತಪ್ಪಿ, 'ಬದುಕು' 'ಅಗ್ನಿ ಸಾಕ್ಷಿ' ಜಾಡು ಹಿಡಿದಂತೆ ಅನಿಸುತ್ತದೆ. ಧಾರಾವಾಹಿ ತನ್ನವೇಗವನ್ನು ಕಳೆದುಕೊಂಡಾಗ, ಮುಂದೇನು ಎಂದು ಕಾತುರದಿಂದ ಕಾಯುವ ವೀಕ್ಷಕರು ಸಹನೆ ಮತ್ತು ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ. ವೀಕ್ಷಕರು ಭಾರ್ಗಿ, ರಶ್ಮಿ, ಜಾನಕಿ ಮತ್ತು ನಿರಂಜನರನ್ನು ನೋಡಲು ಇಷ್ಟ ಪಡುತ್ತಾರೆ. ಕಥೆಯ ಓಟ ಮುಖ್ಯವೇ ಹೊರತು ಕಥೆಗಳ ಕಂತುಗಳಲ್ಲ

—ರಮಾನಂದ ಶರ್ಮಾ, ಬೆಂಗಳೂರು